ಕರ್ನಾಟಕ ಸರಕಾರ

# ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 24-02-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಬಾನುಲಿ ಕಾರ್ಯಕ್ರಮ ನಿರ್ಮಾಣ ಕುರಿತು ಒಂದು ದಿನದ ಕಾರ್ಯಾಗಾರ.<br>ಉದ್ಘಾಟನೆ:<br>ಶ್ರೀ ಆರ್. ರೋಷನ್ ಬೇಗ್, ಮೂಲಸೌಲಭ್ಯ ಅಭಿವೃದ್ಧಿ ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಸಚಿವರು. | 25-2-2015<br>ಬುಧವಾರ<br>ಬೆಳಗ್ಗೆ<br>11-00 ಗಂಟೆಗೆ | ಕೊಠಡಿ 419, ನಾಲ್ಕನೇ ಮಹಡಿ, ಸಮ್ಮೇಳನ ಸಭಾಂಗಣ, ವಿಕಾಸಸೌಧ, ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಸಚಿವರ ಹಾಡಿ ವಾಸ್ತವ್ಯ

ಬೆಂಗಳೂರು, ಫೆಬ್ರವರಿ 24 (ಕರ್ನಾಟಕ ವಾರ್ತೆ)

ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಣ ಸಚಿವರು ದಿನಾಂಕ 27-02-2015 ರಂದು ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲ್ಲೂಕಿನ ಡಿ. ಬಿ. ಕುಪ್ಪೆ ಗ್ರಾಮದಲ್ಲಿರುವ ಗಿರಿಜನ ಆಶ್ರಮ ಶಾಲೆಯ ಆವರಣದಲ್ಲಿ ಮೈಸೂರು ಜಿಲ್ಲೆಯ ಆದಿವಾಸಿ ಬುಡಕಟ್ಟು ಜನರ ಸಮಸ್ಯೆಗಳ ಸಮಲೋಚನೆ ನಡೆಸಿ, ವಿವಿಧ ಇಲಾಖೆಗಳ ಸವಲತ್ತುಗಳನ್ನು ವಿತರಿಸಿ ರಾತ್ರಿ ಮಾನೀಮೂಲೆ ಹಾಡಿಯಲ್ಲಿ ವಾಸ್ತವ್ಯ ಮಾಡಲಿದ್ದಾರೆ. ಬುಡಕಟ್ಟು ಜನರಿಗಾಗಿ ಇರುವ ಯೋಜನೆಗಳ ಸಂಬಂಧ ಸೌಲಭ್ಯಗಳನ್ನು ವಿತರಿಸುವರು.

ಬಾಬು:ಜಿಪಿಆರ್

## 3.07 ಲಕ್ಷ ಅರ್ಜಿ ಸ್ವೀಕಾರ

**ಬೆಂಗಳೂರು, ಫೆಬ್ರವರಿ 24 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಗೆಸೆಟೆಡ್ ಪ್ರೊಬೇಷನರ್ಸ್ 2014 ನೇ ಸಾಲಿನ ಗ್ರೂಪ್ 'ಎ' ಮತ್ತು 'ಬಿ' ವೃಂದದ 440 ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ 22-01-2015 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ದಿನಾಂಕ 22-01-2015 ರಿಂದ 20-02-2015 ರವರೆಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದ್ದು, ಶುಲ್ಕ ಪಾವತಿಸಲು ಕೊನೆಯ ದಿನಾಂಕ 21-02-2015 ಆಗಿದೆ. ಒಟ್ಟು 3,07,270 ಅರ್ಜಿಗಳು ಸ್ವೀಕೃತವಾಗಿದ್ದು, ಅದರಲ್ಲಿ 266876 ಶುಲ್ಕ ಪಾವತಿಸಿದ ಹಾಗೂ 40,396 ಶುಲ್ಕ ಪಾವತಿಸದ ಅರ್ಜಿಗಳಾಗಿದೆ. ಅಭ್ಯರ್ಥಿಗಳು ಅಂಚೆ ಕಚೇರಿಯಲ್ಲಿ ಶುಲ್ಕವನ್ನು ಪಾವತಿಸಿದ್ದರೂ ಕೂಡ ಅರ್ಜಿಯ ಪ್ರತಿ ಮುದ್ರಿತವಾಗದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಶುಲ್ಕ ಸಂದಾಯಿಸಿರುವ ಪೂರಕ ದಾಖಲೆಗಳೊಂದಿಗೆ ಆಯೋಗವನ್ನು ಸಂಪರ್ಕಿಸಲು ಸೂಚಿಸಿದೆ.

ಬಾಬು:ಜಿಪಿಆರ್.

## ಸುಗಮ ಸುಧಾ - ಬಾನುಲಿ ಸುಗಮ ಸಂಗೀತ ಶಿಕ್ಷಣ

**ಬೆಂಗಳೂರು, ಫೆಬ್ರವರಿ 24 (ಕರ್ನಾಟಕ ವಾರ್ತೆ)**

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ಬೆಂಗಳೂರು ಆಕಾಶವಾಣಿ ಕೇಂದ್ರದ ಸಹಯೋಗದಲ್ಲಿ ಮೂರು ತಿಂಗಳ ಬಾನುಲಿ ಸುಗಮ ಸಂಗೀತ ಶಿಕ್ಷಣ ಕೋರ್ಸ್ ಅನ್ನು ಆಯೋಜಿಸಿದೆ. 2015 ರ ಮೇ 3 ರಿಂದ ಪ್ರಾರಂಭವಾಗುವ ಈ ಕೋರ್ಸ್‌ಗೆ 16 ವರ್ಷ ಮೇಲ್ಪಟ್ಟ, ಕನಿಷ್ಠ ಸಂಗೀತ ಜ್ಞಾನ ಹೊಂದಿದ, ಆಸಕ್ತರು ಅರ್ಜಿ ಸಲ್ಲಿಸಬಹುದು. ಬೆಂಗಳೂರು ಆಕಾಶವಾಣಿ ಬಾನುಲಿ ವ್ಯಾಪ್ತಿಯ ಬೆಂಗಳೂರು ನಗರ, ಗ್ರಾಮಾಂತರ, ತುಮಕೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ 50 ಮಂದಿ ಶ್ರೋತೃಗಳಿಗೆ ಮಾತ್ರ ಆದ್ಯತೆಯ ಮೇರೆಗೆ ಪ್ರವೇಶ.

ಶನಿವಾರ ಹಾಗೂ ಭಾನುವಾರಗಳಂದು, ನಿಗದಿತ ಸಮಯಕ್ಕೆ ಅಮೃತವರ್ಷಿಣಿ ಸಂಗೀತ ವಾಹಿನಿ ಮತ್ತು ಬುಧವಾರ ಮತ್ತು ಶುಕ್ರವಾರಗಳಂದು ಎಫ್.ಎಂ. ರೈನ್ ಬೋ ಕನ್ನಡ ಕಾಮನಬಿಲ್ಲು ವಾಹಿನಿಯಲ್ಲಿ ಪ್ರಸಾರವಾರುವ ಈ ಕಾರ್ಯಕ್ರಮದ ಪ್ರಯೋಜನವನ್ನು ಎಲ್ಲಾ ಶ್ರೋತೃಗಳು ಪಡೆಯಬಹುದಾಗಿದೆ. ಉಳಿದಂತೆ, ಸಂದರ್ಶನದ ಮೂಲಕ ಆಯ್ಕೆಗೊಂಡ 50 ಮಂದಿಗೆ ಪ್ರಮಾಣ ಪತ್ರ ಹಾಗೂ ರೂ. 1000/– ಗಳನ್ನು ಚೆಕ್ ಮೂಲಕ ನೀಡಲಾಗುವುದು. ಆಯ್ಕೆಯಲ್ಲಿ ಸಮಿತಿಯ ತೀರ್ಮಾನ ಅಂತಿಮ.

ಆಸಕ್ತರು ಬಿಳಿ ಹಾಳೆಯಲ್ಲಿ ಸ್ವವಿವರ, ಬಣ್ಣದ ಭಾವಚಿತ್ರ ಅಂಚೆ ವಿಳಾಸ ಹಾಗೂ ಸ್ಥಿರ/ಚರವಾಣಿಯ ಸಂಖ್ಯೆಯನ್ನು ನಮೂದಿಸಿ ರಿಜಿಸ್ಟ್ರಾರ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು, ಇವರಿಗೆ 05–03–2015 ರ ಒಳಗೆ ರವಾನಿಸಬೇಕು ಎಂದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.